# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **200**

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 05.03.2025

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಏಪ್ರಿಲ್ 2019ಕ್ಕಿಂತ ಮೊದಲು ನೋಂದಣಿ ಆಗಿರುವ ವಾಹನಗಳ (ಹಳೆಯ ಅಥವಾ ಅಸ್ತಿತ್ವದಲ್ಲಿರುವ) ಸಂಖ್ಯೆ ಎಷ್ಟು? ಹಾಗೂ ಈವರೆವಿಗೂ ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್ (ಹೆಚ್.ಎಸ್.ಆರ್.ಪಿ) ಅಳವಡಿಸಿಕೊಂಡಿರುವ ವಾಹನಗಳ ಸಂಖ್ಯೆ ಮತ್ತು ಇದರ ಶೇಕಡವಾರು ಪ್ರಮಾಣ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಏಪ್ರಿಲ್ 2019ಕ್ಕಿಂತ ಮೊದಲು ಅಂದಾಜು 2.45 ಕೋಟಿ ವಾಹನಗಳು ನೋಂದಣಿಯಾಗಿದ್ದು, ಸುಮಾರು **2** ಕೋಟಿ ವಾಹನಗಳು ಅಸ್ತಿತ್ವದಲ್ಲಿವೆ.<br><br>ಇವುಗಳ ಪೈಕಿ, ದಿನಾಂಕ:18-08-2023 ರಿಂದ 28-02-2025 ರವರೆಗೆ ಒಟ್ಟು **58,12,207** ವಾಹನಗಳಿಗೆ ಹೆಚ್.ಎಸ್.ಆರ್.ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳ ಪೈಕಿ, **57,20,550** ವಾಹನಗಳಿಗೆ ಹೆಚ್.ಎಸ್.ಆರ್.ಪಿ ನಂಬರ್ ಪ್ಲೇಟ್ ಅಳವಡಿಕೆಯಾಗಿರುತ್ತವೆ.<br><br>ಮೇಲಿನ ಅಂಕಿ-ಅಂಶಗಳ ಪ್ರಕಾರ ಒಟ್ಟಾರೆ ಶೇ.**29%** ಪ್ರಮಾಣದ ವಾಹನಗಳಿಗೆ ಹೆಚ್.ಎಸ್.ಆರ್.ಪಿ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ಜಿಲ್ಲಾವಾರು ವಾಹನಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ. | ವಾಹನಗಳಿಗೆ ಹೆಚ್.ಎಸ್.ಆರ್.ಪಿ ಅಳವಡಿಸಿಕೊಳ್ಳಲು ನೀಡಿದ್ದ ಗಡುವು ಮುಕ್ತಾಯಗೊಂಡಿದೆಯೇ: (ವಿವರ ನೀಡುವುದು) ಗಡುವನ್ನು ಮತ್ತೊಮ್ಮೆ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆಯೇ: (ವಿವರ ನೀಡುವುದು) | ವಾಹನಗಳಿಗೆ ಹೆಚ್.ಎಸ್.ಆರ್.ಪಿ. ನೋಂದಣಿ ಫಲಕ ಅಳವಡಿಕೆ ವಿಷಯದ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ WP Nos.19861/2023, 20148/2023 & 20971/2023 ಮತ್ತು ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಮಾರ್ಚ್ 2025ರ ಮಾಹೆಯಲ್ಲಿ ನಿಗದಿಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಹೆಚ್.ಎಸ್.ಆರ್.ಪಿ. ಅಳವಡಿಸಲು ದಿನಾಂಕ:**31-01-**2025 ರವರೆಗೆ ಇದ್ದ ಕಾಲಾವಕಾಶವನ್ನು ದಿನಾಂಕ:**31-03-2025** ರವರೆಗೆ ವಿಸ್ತರಣೆ ಮಾಡಲಾಗಿದೆ. |
| ಇ. | ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಅಳವಡಿಸಿಕೊಳ್ಳಲು ನೀಡಿದ್ದ ಗಡುವನ್ನು ಇದುವರೆವಿಗೂ ಎಷ್ಟು ಬಾರಿ ವಿಸ್ತರಿಸಲಾಗಿದೆ; (ದಿನಾಂಕದೊಂದಿಗೆ ವಿವರ ನೀಡುವುದು) | ವಾಹನಗಳಿಗೆ ಹೆಚ್.ಎಸ್.ಆರ್.ಪಿ. ಅಳವಡಿಸಿಕೊಳ್ಳಲು ಕಾಲಾವಕಾಶವನ್ನು ವಿಸ್ತರಿಸಿದ ಆದೇಶದ ವಿವರಗಳು ಕೆಳಕಂಡಂತಿವೆ:- |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ಕ್ರ. ಸಂ.</th><th>ಅಧಿಸೂಚನೆ ಸಂಖ್ಯೆ / ದಿನಾಂಕ</th><th>ಕಾಲಾವಕಾಶ ವಿಸ್ತರಿಸಿದ ದಿನಾಂಕ</th></tr>
<tr><td>1.</td><td>ಟಿಡಿ 193 ಟಿಡಿಒ 2021, ದಿನಾಂಕ:16-11-2023</td><td>17-11-2023 ರಿಂದ 17-02-2024.</td></tr>
<tr><td>2.</td><td>ಟಿಡಿ 193 ಟಿಡಿಒ 2021/ಪಿ1 ದಿನಾಂಕ:16-02-2024</td><td>17-02-2024 ರಿಂದ 31-05-2024.</td></tr>
<tr><td>3.</td><td>ಟಿಡಿ 193 ಟಿಡಿಒ 2021, ದಿನಾಂಕ:19-06-2024</td><td>15-09-2024 ರವರೆಗೆ.</td></tr>
<tr><td>4.</td><td>ಟಿಡಿ 193 ಟಿಡಿಒ 2021, ದಿನಾಂಕ:30-10-2024.</td><td>30-11-2024 ರವರೆಗೆ.</td></tr>
<tr><td>5.</td><td>ಟಿಡಿ 193 ಟಿಡಿಒ 2021, ದಿನಾಂಕ:30-11-2024.</td><td>31-12-2024 ರವರೆಗೆ.</td></tr>
<tr><td>6.</td><td>ಟಿಡಿ 193 ಟಿಡಿಒ 2021, ದಿನಾಂಕ:03-01-2025</td><td>31-01-2025 ರವರೆಗೆ.</td></tr>
<tr><td>7.</td><td>ಟಿಡಿ 193 ಟಿಡಿಒ 2021, ದಿನಾಂಕ:20-02-2025.</td><td>31-03-2025 ರವರೆಗೆ.</td></tr>
</table>
</td></tr>
<tr><td>ಈ.</td><td>ಹೆಚ್.ಎಸ್.ಆರ್.ಪಿ ನಂಬರ್ ಪ್ಲೇಟ್ ಅಳವಡಿಸಿಕೊಳ್ಳದ ವಾಹನಗಳನ್ನು ಪ್ರತಿ ಬಾರಿ ಪೊಲೀಸರು ಹಿಡಿದಾಗಲೂ ವಿಧಿಸಲಾಗುವ ದಂಡದ ಮೊತ್ತ ಎಷ್ಟು;</td><td>ನಿಗದಿತ ದಿನಾಂಕದೊಳಗೆ ಹೆಚ್.ಎಸ್.ಆರ್.ಪಿ. ಅಳವಡಿಸದಿದ್ದಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ: ಟಿಡಿ 250 ಟಿಡಿಒ 2019, ಬೆಂಗಳೂರು, ದಿನಾಂಕ:21-09-2019 ರ ಪ್ರಕಾರ ಕಲಂ 177ರಡಿ ಮೊದಲನೇ ಅಪರಾಧಕ್ಕೆ ರೂ.500/- ಹಾಗೂ 2ನೇ ಮತ್ತು ನಂತರದ ಅಪರಾಧಗಳಿಗೆ ರೂ.1000/-ದಂತೆ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳನ್ವಯ ದಂಡವನ್ನು ವಿಧಿಸಲಾಗುತ್ತದೆ.</td></tr>
<tr><td>ಉ.</td><td>ಸದರಿ ವಿಷಯದಲ್ಲಿ ನಿರೀಕ್ಷಿತ ಪ್ರಗತಿ ಆಗದಿರುವುದಕ್ಕೆ ಗುರುತಿಸಿರುವ ಕಾರಣಗಳೇನು?</td><td>ವಾಹನಗಳಿಗೆ ಹೆಚ್.ಎಸ್.ಆರ್.ಪಿ. ನೋಂದಣಿ ಫಲಕ ಅಳವಡಿಕೆ ವಿಷಯದ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ WP Nos.19861/2023, 20148/2023 & 20971/2023 ಮತ್ತು ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಮಾರ್ಚ್ 2025ರ ಮಾಹೆಯಲ್ಲಿ ನಿಗದಿಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಹೆಚ್.ಎಸ್.ಆರ್.ಪಿ. ಅಳವಡಿಸಲು ದಿನಾಂಕ:31-01-2025 ರವರೆಗೆ ಇದ್ದ ಕಾಲಾವಕಾಶವನ್ನು ದಿನಾಂಕ:31-03-2025 ರವರೆಗೆ ವಿಸ್ತರಣೆ ಮಾಡಲಾಗಿದೆ. ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳಲು ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುವ ಮೇರೆಗೆ, ಸದರಿ ವಿಷಯದಲ್ಲಿ ನಿರೀಕ್ಷಿತ ಪ್ರಗತಿಯಾಗಿರುವುದಿಲ್ಲ.</td></tr>
</table>

**ಟಿಡಿ 5 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:200 ಕ್ಕೆ ಅನುಬಂಧ**

| ಕ್ರಮ ಸಂಖ್ಯೆ | ಜಿಲ್ಲೆ | ಹೆಚ್.ಎಸ್.ಆರ್.ಪಿ. ಅಳವಡಿಸಿರುವ ವಾಹನಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 24,77,653 |
| 2 | ಬೆಂಗಳೂರು ಗ್ರಾಮಾಂತರ | 43,193 |
| 3 | ಮೈಸೂರು | 4,07,830 |
| 4 | ಧಾರವಾಡ | 1,49,084 |
| 5 | ದಕ್ಷಿಣ ಕನ್ನಡ | 2,76,014 |
| 6 | ಬೆಳಗಾವಿ | 2,61,807 |
| 7 | ಕಲಬುರ್ಗಿ | 80,808 |
| 8 | ಕೋಲಾರ | 56,489 |
| 9 | ಹೊಸಪೇಟೆ | 27,499 |
| 10 | ತುಮಕೂರು | 1,84,318 |
| 11 | ರಾಮನಗರ | 46,530 |
| 12 | ಚಿಕ್ಕಬಳ್ಳಾಪುರ | 44,157 |
| 13 | ಮಂಡ್ಯ | 1,12,472 |
| 14 | ಹಾಸನ | 1,21,731 |
| 15 | ಚಾಮರಾಜನಗರ | 45,320 |
| 16 | ಕೊಡಗು | 43,163 |
| 17 | ಉತ್ತರ ಕನ್ನಡ | 1,51,553 |
| 18 | ಚಿಕ್ಕಮಗಳೂರು | 1,04,267 |
| 19 | ಉಡುಪಿ | 1,31,713 |
| 20 | ದಾವಣಗೆರೆ | 1,44,793 |
| 21 | ಚಿತ್ರದುರ್ಗ | 77,384 |
| 22 | ಶಿವಮೊಗ್ಗ | 2,06,812 |
| 23 | ಹಾವೇರಿ | 84,011 |
| 24 | ವಿಜಯಪುರ | 90,387 |
| 25 | ಬಾಗಲಕೋಟೆ | 91,657 |
| 26 | ಗದಗ್ | 36,682 |
| 27 | ಬೀದರ್ | 36,545 |
| 28 | ಯಾದಗಿರಿ | 19,896 |
| 29 | ರಾಯಚೂರು | 55,378 |
| 30 | ಕೊಪ್ಪಳ | 69,080 |
| 31 | ಬಳ್ಳಾರಿ | 42,324 |
| | **ಒಟ್ಟು** | **57,20,550** |